


### ಮಾಹಿತಿಪೂರ್ಣ

'ಸ್ಮಾರ್ಟ್ ಹೋಮ್', ಪ್ರವೀಣ ಕುಲಕರ್ಣಿ ಅವರ ಮುಖಪುಟ ಲೇಖನ (ಸುಧಾ ನ. 27) ಓದಿ ಸಂತಸವಾಯಿತು. ಮನಸ್ಸಿಗೆ ನೆಮ್ಮದಿ ನೀಡುವ ತಾಣ ಮನೆ. ಇದರ ಬಗ್ಗೆ ವಿವರವಾದ ಮಾಹಿತಿ ನೀಡಿದ್ದು, ಚಿತ್ರಗಳೂ ಪೂರಕವಾಗಿವೆ.

-ಸು. ವಿಜಯಲಕ್ಷ್ಮಿ, ಶಿವಮೊಗ್ಗ, ಹೇಮಾ ಸುಬ್ರಹ್ಮಣ್ಯ ಹಾಲ್ಮುತ್ತೂರು, ಮೇ.ಗೋ. ಸುಬ್ಬಣ್ಣ, ಮೇಗರವಳ್ಳಿ, ಶೋಭಾ ಜಿ. ತಿಳವೆ, ದಾವಣಗೆರೆ

### ಸ್ಮಾರ್ಟ್ ಜನರಿಗಷ್ಟೆ!

ನಾಗರಿಕತೆ–ತಂತ್ರಜ್ಞಾನಗಳು ಅದೆಷ್ಟು ಮುಂದುವರಿದಿವೆ ಎಂಬುದಕ್ಕೆ ಈ ಸ್ಮಾರ್ಟ್ ಹೋಮ್‌ಗಳೇ ಸಾಕ್ಷಿಯಾಗಲಿವೆ. ದುಬಾರಿ ವೆಚ್ಚದ ಸ್ಮಾರ್ಟ್ ಹೋಮ್‌ಗಳನ್ನು ಹೊಂದುವ ಕನಸು ಸ್ಮಾರ್ಟ್ ಜನರಿಗೆ ಮಾತ್ರ ಸಾಧ್ಯವಲ್ಲವೆ.?

-ಎಂ.ಜಿ. ರಾಮಚಂದ್ರ, ಮಂಡಗಳಲೆ

### ಮನೋಜ್ಞ ವಿವರಣೆ

'ನಿಮ್ಮೊಡನೆ' ಅಂಕಣದಲ್ಲಿ 'ಶಿಕ್ಷಣ, ಆದರ್ಶ ಮತ್ತು ಆತ್ಮಬಲ' ಕುರಿತು ಲೇಖಕ ಎನ್. ಉದಯ್ ಕುಮಾರ್ ಅವರು ಅಂದಿನ ಮತ್ತು ಇಂದಿನ ಶಿಕ್ಷಣ ಕ್ಷೇತ್ರದ ಸ್ಥಿತಿಗತಿಗಳನ್ನು ಮನೋಜ್ಞವಾಗಿ ವಿವರಿಸಿದ್ದಾರೆ.

-ಮಹಾವೀರ ಕಾಸರ, ಶಿವಮೊಗ್ಗ, ಪ್ರದೀಪ್ ಎನ್.

### ನೋನಿ ದುಬಾರಿ

'ನಿಸರ್ಗದ ಹಣ್ಣು ನೋನಿ' (ವಿ. ಬಾಲಕೃಷ್ಣ ಶಿರ್ವ) ಲೇಖನ ಚೆನ್ನಾಗಿದೆ. ಇಂದು ನೋನಿ ಕಷಾಯವು ಮಾರುಕಟ್ಟೆಯಲ್ಲಿ ಜನಸಾಮಾನ್ಯರ ಕೈಗೆಟುಕದಷ್ಟು ದುಬಾರಿ ದರದಲ್ಲಿ ಮಾರಾಟವಾಗುತ್ತಿದೆ. 'ಅಮೃತ ನೋನಿ'ಯನ್ನು ಶ್ರೀನಿವಾಸ ಮೂರ್ತಿ ಅವರು ಯಾವುದೇ ಲಾಭದಾಸೆಯಿಲ್ಲದೆ ಮಾರುತ್ತಿರುವುದು ಸ್ತುತ್ಯಾರ್ಹ. ಕುಂದಾಪುರದ ಶೆಣೈರವರು ಕೈಗೆಟುಕುವ ದರದಲ್ಲಿ ಒಂದು ಲೀಟರ್ ನೋನಿ ಕಷಾಯವನ್ನು ಮನೆ ಬಾಗಿಲಿಗೆ ಸರಬರಾಜು ಮಾಡುತ್ತಿದ್ದಾರೆ.

-ಹೇಕಮಂ ಮಧ್ಯಸ್ತ ಫಲ್ಗುಣಿ, ಮೂಡಿಗೆರೆ

### ಆಕರ್ಷಕ ಬ್ರೇಸ್ಲೆಟ್

'ಫಿಂಗರ್ ಬ್ರೇಸ್ಲೆಟ್; ಆಗಿ ಸ್ಮಾರ್ಟ್!' (ಆಶಾ ಎಸ್. ಕುಲಕರ್ಣಿ) ಫ್ಯಾಷನ್ ಲೇಖನ ಚೆನ್ನಾಗಿತ್ತು. ಕೈಗಳ ಅಂದವನ್ನು ಹೆಚ್ಚಿಸುವ ಬ್ರೇಸ್ಲೆಟ್ ನಿಜಕ್ಕೂ ನೋಡುಗರನ್ನು ಆಕರ್ಷಿಸುತ್ತವೆ.

-ಪುಟ್ಟಗೌರಿ, ಚಿದಾನಂದ, ಕಳಸಮ್ಮ, ಗುಲ್ಬರ್ಗ

### ಮಾಡಲು ಕೆಲಸವಿಲ್ಲದವರಿಗೆ ಸೂಕ್ತ

ಮನೆಯಲ್ಲಿ ಕೆಲಸ ಮಾಡುವ ಅಗತ್ಯವಿಲ್ಲದಿದ್ದಲ್ಲಿ ಇಂತಹ 'ಫಿಂಗರ್ ಬ್ರೇಸ್ಲೆಟ್' ಧರಿಸಿಕೊಂಡು ರಾಣಿ ಕ್ಲಿಯೋಪಾತ್ರಳಂತೆ ಕೈಯನ್ನು ಅಲುಗಾಡಿಸುತ್ತ ಸೋಫಾ ಮೇಲೆ ಕೂರುವವರಿಗೆ ಇದು ಸೂಕ್ತ.

-ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು

### ರೋಚಕ ಕಥೆ

ಬಿ.ಎಲ್. ವೇಣುರವರ 'ಅಂಕಲ್' ಕಥೆ ವಿಪರ್ಯಾಸ, ಶೋಚನೀಯ, ಅಸಹಾಯಕತೆ, ಕುತೂಹಲ, ಅಸಭ್ಯ, ಅನುಮಾನ, ದುಡುಕುತನ ಹೀಗೆ ಎಲ್ಲವನ್ನೂ ಒಳಗೊಂಡ ರೋಚಕ ಕಥೆ.

-ಪ್ರದೀಪ್, ಎನ್. ಚೆಲುವರಸನ ಕೊಪ್ಪಲು, ಲೋಕಪ್ರಿಯ, ಕೈವಾರ, ಕೆ.ವಿ. ಲಕ್ಷ್ಮೀನಾರಾಯಣ, ಬೆಂಗಳೂರು

### ಕೆಟ್ಟ ಕಥೆ

'ಅಂಕಲ್' ಅತ್ಯಂತ ಕೆಟ್ಟ ಸಂದೇಶ ಬೀರುವ ಕಥೆ. ದಯವಿಟ್ಟು ಇಂತಹ ಕಥೆಗಳನ್ನು ಪ್ರಕಟಿಸಬೇಡಿ.

-ಶ್ರೀಧರ, ಬೆಂಗಳೂರು

### ಮಾಮೂಲಿ ಕಥೆ

ಕಥೆ 'ಅಂಕಲ್', ಇಂದು ನಡೆಯುತ್ತಿರುವ ಅತ್ಯಾಚಾರಗಳು, ತಂದೆಯಿಂದಲೇ ತಮ್ಮ ಹೆಣ್ಣುಮಕ್ಕಳ ಮೇಲೆ ನಡೆಯುತ್ತಿರುವ ಲೈಂಗಿಕ ಶೋಷಣೆಯನ್ನೇ ಗಮನವಾಗಿರಿಸಿಕೊಂಡು ರಚಿಸಿದ ಕಥೆ. ಕಥೆಯಲ್ಲಿ ವಿಶೇಷವೇನೂ ಇರಲಿಲ್ಲ.

-ಸುಂದರ್, ಬೆಂಗಳೂರು

### ಉತ್ತಮ ಲೇಖನ

ಡಾ. ಕೆ.ವಿ. ಸಂತೋಷ್‌ರವರ ಪಾಕೆಟ್ ಮನಿ ಲೇಖನ ಚೆನ್ನಾಗಿದೆ.

-ಸುಶಾಂತ ಗಬಡಿ

### ಚೆನ್ನಾಗಿ ಬರುತ್ತಿದೆ

'ಆಪ್ತಗೆಳತಿ' ಅಂಕಣ (ಡಾ. ಪದ್ಮಿನಿ ಪ್ರಸಾದ್) ಚೆನ್ನಾಗಿ ಮೂಡಿ ಬರುತ್ತಿದೆ. ಹೆಸರಿನಲ್ಲಿ ಗೌಪ್ಯತೆ ಕಾಪಾಡುವುದು ಒಳ್ಳೆಯ ಪದ್ಧತಿ.

-ಎಸ್. ದಿನ್ನಿ

www.solitairesinks.in



ಒಂದು ಪ್ರಕಾರದ್ದು !

ಹೌದು ಸಾಲಿಟೇರ್ ನಿಜವಾಗಿಯೂ.

ಬ್ಲಾಂಕೋದ ವಿಶ್ವ ವಿಖ್ಯಾತ ಜರ್ಮನ್ ತಂತ್ರಜ್ಞಾನ ಮತ್ತು ಡೈಮಂಡ್‌ನ ಕಳಂಕರಹಿತ ಕಾರ್ಯಕುಶಲತೆಯಾದ ಸೊಲಿಟೇರ್‌ನ್ನು ನಾವಿನ್ಯಪೂರ್ಣ ಆಶ್ಚರ್ಯಕರ ಸಿಲ್ ಕ್ವಾರ್ಟ್ಝ್ ಸಾಮಾಗ್ರಿಯಿಂದ ತಯಾರಿಸಲಾಗಿದೆ. ಅಂದರೆ ಇದು ಅತ್ಯಂತ ಸುಂದರವಾಗಿದ್ದು ಆನಂದ ನೀಡವಂಥಾದ್ದಾಗಿದ್ದು ಗಟ್ಟಿಮುಟ್ಟಾಗಿದೆ, ಸ್ವಚ್ಛವಾಗಿದೆ ಮತ್ತು ಎಂದೂ ಇದರಲ್ಲಿ ಕೆರೆತ ಉಂಟಾಗವುದಿಲ್ಲ ಮತ್ತು ಮಸುಕಾಗುವುದಿಲ್ಲ ಎಂದರ್ಥವಾಗಿದೆ.

ಭಾರತದಲ್ಲಿ ಮೊತ್ತಮೊದಲ ಬಾರಿಗೆ ಪರಿಚಯಿಸಲಾಗಿದ್ದು, ಇದು ನಿಮ್ಮ ಅಡುಗೆ ಮನೆಗೆ ವಿಶೇಷ ಮೆರುಗನ್ನು ನೀಡುತ್ತದೆ. ಮತ್ತು ನಿಮ್ಮ ಅಡುಗೆಮನೆಯನ್ನುಕಂಡು ಇತರರುಹುಬ್ಬೇರಿಸದೆ ಇರುವುದಿಲ್ಲ.

ಮನೆತನದ ರಾಸಾನಿಕ ಪ್ರತಿರೋಧಕ • ಕೊಳೆಯನ್ನು ಹೊಡೆದೋಡಿಸುತ್ತದೆ • ಉಷ್ಣ ಮತ್ತು ಪರಿಣಾಮ ಪ್ರತಿರೋಧಕ • 100% ಫೇಡ್ ಪ್ರೂಫ್ • ಯಾವುದೇ ಜೆಲ್, ಪಾಲಿಷ್ ಅಥವಾ ವಾರ್ನಿಷ್ ಉಪಯೋಗಿಸದಿರುವ ಕಾರಣ ಆಹಾರ ಪದಾರ್ಥಕ್ಕೆ ಸುರಕ್ಷಿತವಾಗಿದೆ • ಆಕರ್ಷಕ ಬಿಳಿ, ಬೂದು ಮತ್ತು ಕಪ್ಪು ಬಣ್ಣಗಳಲ್ಲಿ ಉಪಲಬ್ಧ • ಕೆರೆತ ವಿರೋಧಿ

அங்கீகரிக்கப்பட்ட விநியோகஸ்தர்: திரிஷலா கார்போரேஷன்
தொபே: +91 (44) 2834 1818, 2834 1919
E trishlache@gmail.com, trishlaexports@yahoo.com

GreenBrand

solitaire
silquartz sinks

water